ಪ್ರಸಂಗದ ಅರ್ಜುನ, ಕಿರ್ಮೀರವಧಂ ಪ್ರಸಂಗದ ಧರ್ಮಪುತ್ರ(ಯುಧಿಷ್ಠಿರ)ನ ಪಾತ್ರಗಳ ನಿರ್ವಹಣೆಯು ವಿಭಿನ್ನ ರೀತಿಯವು. ಪ್ರತಿನಾಯಕ ಪಾತ್ರಗಳಾದ ದುರ್ಯೋಧನ, ರಾವಣ ಪಾತ್ರಗಳನ್ನೂ ಮಾಡಿದ್ದೇನೆ. ಕುಚೇಲ, ಪೂತನಿ, ಬಾಹುಕ ಪಾತ್ರಗಳಿಗೂ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾದದ್ದು ನೆನಪಿದೆ. ಆದರೆ ಇದು ನನ್ನ ಇಷ್ಟದ ಪಾತ್ರ ಎಂದು ನಾನೆಂದೂ ಹೇಳಲು ಸಾಧ್ಯವಿಲ್ಲ. ರಂಗದ ಮೇಲೆ ನಾನೇನು ಮಾಡುತ್ತೇನೋ ಅದರ ಬಗ್ಗೆ ನನಗೇನೂ ಹೇಳುವುದಕ್ಕಿಲ್ಲ.

**◆ ಮನದಲ್ಲಿ ಬಹಳ ನೆನಪಿರುವ ಪ್ರದರ್ಶನ ಯಾವುದು ?**

ಎಲ್ಲವೂ ಸ್ಪಷ್ಟ ನೆನಪಿದೆ ನನಗೆ. ಜಗತ್ತಿನ ವಿವಿಧೆಡೆಗಳಲ್ಲಿ ಪ್ರದರ್ಶನಗಳನ್ನು ನೀಡುವ ಅವಕಾಶವನ್ನು ಗುರುವಾಯೂರಪ್ಪ ಕರುಣಿಸಿದ್ದಾನೆ. ಆದರೆ ಫ್ರಾನ್ಸ್‌ನಲ್ಲಿ ರೌದ್ರಭೀಮನ ಪ್ರದರ್ಶನವಿತ್ತು. ಪೊನ್ನಾನಿ (ಪ್ರಧಾನ ಹಾಡುಗಾರರು) ಮತ್ತು ಶಿಂಗಿಡಿಯವರ (ಎರಡನೇ ಹಾಡುಗಾರರು) ಹಾಡು, ಚಿಕ್ಕತಾಳ, ಚೆಂಡೆಯ ಸದ್ದು ಅಲ್ಲೊಂದು ಗುಂಗನ್ನು ಮೂಡಿಸಿತ್ತು. ಪ್ರದರ್ಶನದ ಲಯವು ತಾರಕಕ್ಕೇರುತ್ತಿದ್ದಂತೆಯೇ, ಭೀಮನು, ದುಶ್ಯಾಸನನ ಕರುಳನ್ನು ಬಗೆಯುವ ಸನ್ನಿವೇಶವನ್ನು ನೋಡಿ ಮಹಿಳೆಯೊಬ್ಬಳು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟಿದ್ದಳು. ಅವಳು ಗರ್ಭಿಣಿ. ಕಥಕಳಿಯನ್ನು ನೋಡಬೇಕೆಂಬ ಅತ್ಯಾಸೆಯಿಂದ ಅಲ್ಲಿಗೆ ಬಂದಿದ್ದಳು. ಅಲ್ಲಿನ ಪ್ರೇಕ್ಷಕರು ಇಡೀ ಪ್ರದರ್ಶನವನ್ನು ತಲ್ಲೀನತೆಯಿಂದ ಆಸ್ವಾದಿಸಿದರು. ಮಂಗಳ ಸನ್ನಿವೇಶಗಳಲ್ಲಿ ಮೊಳಗಿಸಿದ ಶಂಖನಾದವು ಅವರ ಗ್ರಹಿಕೆಯನ್ನು ಮತ್ತಷ್ಟು ಭದ್ರವಾಗಿ ಹಿಡಿದಿಟ್ಟಂತಿತ್ತು. ಅವರ ಗ್ರಹಿಕೆ, ಘನತೆ ಮತ್ತು ಸಭಾಂಗಣದಲ್ಲಿ ಪ್ರದರ್ಶನಕ್ಕೆ ಅವರು ನೀಡುವ ಗೌರವಯುತ ಪ್ರತಿಕ್ರಿಯೆಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ರೌದ್ರವೇಷಧಾರಿ ಭೀಮನ ನಡೆಯಲ್ಲಿ ಬಳಸುವ ಚೆಂಡೆಯೂ, ಮಿನುಗು ವೇಷದ (ಇಲ್ಲಿ ದ್ರೌಪದಿ, ಸಾಮಾನ್ಯವಾಗಿ ಸ್ತ್ರೀವೇಷ, ನಾರದ, ಋಷಿ... ಮುಂತಾದ ಮೃದುಸ್ವಭಾವದ ವೇಷಗಳಿಗೆ ಮಿನುಗುವೇಷ ಎನ್ನುತ್ತಾರೆ) ನಡೆಗೆ ಬಳಸುತ್ತಿದ್ದ ಮದ್ದಳೆ, ಇಡಕ್ಕ (ಉಡಿಕ್ಕೆ) ಪ್ರೇಕ್ಷಕರ ಭಾವವನ್ನು ಬಡಿದೆಬ್ಬಿಸುವಂತಿತ್ತು. ಕಲೆಯು ಜನರ ಮನವನ್ನು ತಲುಪಬೇಕಿದ್ದರೆ ದೇಶ ಭಾಷೆಯ ಹಂಗಿಲ್ಲ ಎಂದು ಎಷ್ಟೋ ಬಾರಿ ನನಗೆ ಅರಿವಾಗಿದೆ.

ಕಥಕಳಿಯಲ್ಲಿ ಸಾಮಾನ್ಯವಾಗಿ ಹಿಮ್ಮೇಳದಲ್ಲಿ ಪೊನ್ನಾನಿಯವರು ಮಣಿಪ್ರವಾಳ (ಸಂಸ್ಕೃತ ಮತ್ತು ಮಲಯಾಳಂನ ಮಿಶ್ರಣ) ಭಾಷೆಯಲ್ಲಿ ಹಾಡುತ್ತಾರೆ. ಇತ್ತೀಚೆಗೆ ಶುದ್ಧ ಮಲಯಾಳದ ಬಳಕೆ ಹೆಚ್ಚುತ್ತಿದೆ. ನಾವು ಕಿಂಗ್‌ಲಿಯರ್, ಡಾನ್ ಕಿಹೋಟೆಯಂತಹ ಪ್ರದರ್ಶನಗಳನ್ನೂ ಮಾಡಿದ್ದೇವೆ.



ಆಸ್ಟ್ರೇಲಿಯಾ ಮೂಲದ ಮಹಿಳೆ ಆನ್ನೆಟ್ ಲಿಡೇ ಎಂಬವರು ಬಹಳ ಉತ್ಸಾಹದಿಂದ 'ಕಲಾಮಂಡಲಂ'ಗೆ ಬಂದು ಗುರು ಪದ್ಮನಾಭನ್ ನಾಯರ್ ಬಳಿಯೇ ಕಥಕಳಿ ಕಲಿತರು. ಕಿಂಗ್‌ಲಿಯರ್ ಪ್ರದರ್ಶನಕ್ಕಾಗಿ ಕೆಲಸ ಮಾಡಿದ ನೆನಪುಗಳು ಇನ್ನೂ ಹಸಿರಾಗಿವೆ. ಆನೆಟ್ ಅವರ ಒಡನಾಡಿ ಡೇವಿಡ್ ಮ್ಯಾಕ್ರೂವಿ ಅವರು ಕಿಂಗ್‌ಲಿಯರ್ ಕಥೆಯನ್ನು ಕಥಕಳಿಗೆ ಹೊಂದುವಂತೆ ಸಾಮಾನ್ಯ ಇಂಗ್ಲಿಷ್‌ಗೆ ಅನುವಾದಿಸಿದರು. ನಂತರ ಈಯಂಗೋಡು ಶ್ರೀಧರನ್, ಮರುಮಕನ್ ರಾಜಾವು ಅವರು ಮಲಯಾಳ ಭಾಷೆಯಲ್ಲಿ ಕಥಕಳಿಯ ಹಿಮ್ಮೇಳ ಹಾಡುಗಾರಿಕೆಗೆ ಬೇಕಾದ ಹಾಡುಗಳನ್ನು